ಕಾಡಿಗೆ ಕಣ್ಣು

**ಕಲೀಮ್ ಉಲ್ಲಾ**



# ಗಣೇಶಗುಡಿಯ ಚಿರತೆ

ತೊಟ್ಟಿಲಂತೆ ತೂಗುವ ಜೀಪಿನ ನಡಿಗೆಗೆ ಕೊಂಚ ತೂಕಡಿಕೆಗೆ ಜಾರಿದ್ದ ಅವನು ಸಾರ್ ಲೆಪರ್ಡ್, ಲೆಪರ್ಡ್, ಸಾರ್ ಲೆಪರ್ಡ್ ಎಂದು ಕೋರ್ಟಿನಲ್ಲಿ ಕರೆಯುವಂತೆ ಮೂರು ಸಲ ಕೂಗಿದ. ನಿದ್ದೆ ಮಂಪರಿನಲ್ಲಿ ಕನಸು ಕಂಡಿರಬೇಕೆಂದು ನಾವೆಲ್ಲಾ ನಕ್ಕೆವು. ಆದರವನು ಖಚಿತವಾಗಿದ್ದ.



ನಾಗರಹೊಳೆ ಕಾಡಿಗೆ ಬಂದು ಆಗಲೆ ಎರಡು ದಿನಗಳಾಗಿದ್ದವು. ಇವತ್ತೇ ಕೊನೇ ದಿನ. ಕಬಿನಿ ಬಿಟ್ಟು ಹೊರಡಬೇಕಿತ್ತು. ಮೊದಲ ಸಲ ಸಿಕ್ಕಾಪಟ್ಟೆ ನಿರೀಕ್ಷೆ ಹೊತ್ತು ಬಂದಿದ್ದೆವು. ಹುಲಿ, ಚಿರತೆಯ ಮುಖದರ್ಶನ ಆಗಲಿಲ್ಲವಲ್ಲ ಎಂಬ ಕೊರಗು ಕಾಡುತ್ತಿತ್ತು. ಫೋಟೊಗ್ರಫಿಯಲ್ಲಿ ಈ ತರಹದ ನಿರಾಶೆಗಳು ಕಟ್ಟಿಟ್ಟ ಬುತ್ತಿ. ಇಂತದ್ದಕ್ಕೆಲ್ಲಾ ಬೇಜಾರಾಗಬಾರದು ಎಂಬ ನಿಯಮ ಗೊತ್ತಿದ್ದರೂ ನಮ್ಮ ದುರಾಸೆಯ ಬುದ್ಧಿ ಯಾರ ಮಾತು ಕೇಳುವುದಿಲ್ಲ. ನೋಡಿದರೆ ಸರ್ರನೆ ಕರಿಮೋಡ ಕೂಡ ಕವಿಯತೊಡಗಿತ್ತು. ಸಣ್ಣನೆಯ ಮಳೆಯೂ ಬಿದ್ದು ನಮ್ಮ ಆತಂಕ ಎರಡುಪಟ್ಟು ವೇಗ ಗಳಿಸಿತು. ಇಂತಹ ಘಟನೆಗಳು ನಡೆದರೆ ಅವು ಛಾಯಾಚಿತ್ರ ತೆಗೆಯುವವರಿಗೆ ಅಶುಭದ ಸೂಚನೆಗಳು ಇದ್ದಂತೆ. ಕೊನೆಗೆ ಸಣ್ಣ ಬಿಸಿಲೊಂದು ಕ್ಷಣ ಕಾಲ ಬಿದ್ದರೂ ಸಾಕು ಒಂದಿಷ್ಟು ಪುಡಿ ವ್ಯಾಪಾರವಾದರೂ ಆದೀತೆಂಬ ದೂರದಾಶೆಯೂ ಇಲ್ಲವಾಗಿತ್ತು.

ಅದೇನೋ ಗೊತ್ತಿಲ್ಲ, ಕೆಲವು ಸಲ ಮಳೆ ಬಿದ್ದ ಕೂಡಲೇ ಹಿತವಾದ ಬಿಸಿಲು ಬಿದ್ದೇ ಬಿಡುತ್ತದೆ. ಇದನ್ನು ಪ್ರಕೃತಿಯ ಚಮತ್ಕಾರ ಎಂದಾದರೂ ಭಾವಿಸಿಕೊಳ್ಳಿ. ಇದನ್ನು ನಾವು ಬಂಗಾರದ ಬೆಳಕು ಎಂದು ಕರೆಯುತ್ತೇವೆ. ಚಿನ್ನದಷ್ಟೇ ಬೆಲೆ ಬಾಳುವ ಅಪೂರ್ವ ಕಿರಣಗಳಿವು. ಇಂತಹ ಸಮಯದಲ್ಲಿ ಹುಲಿ, ಚಿರತೆ ಬಿಡಿ ಕೊನೇ ಪಕ್ಷ ಊರ ಕತ್ತೆ ಸಿಕ್ಕರೂ ಅದ್ಭುತ ಫೋಟೊ ಆಗಿ ಬಿಡುತ್ತದೆ. ಗೋಲ್ಡನ್ ಲೈಟ್ ಎಂದು ಕರೆಯಲ್ಪಡುವ ಈ ಮಾಯಾಂಗನೆಯ ಮಹಾತ್ಮೆಯೇ ಅಂತದ್ದು. ಆದರೆ, ನಮಗಿವತ್ತು ಎಲ್ಲಾ ಕನಸುಗಳು ಖಾಲಿಯಾಗಿ ಜೋಲುಮುಖವಷ್ಟೇ ನಿಗದಿಯಾಗಿತ್ತು.